**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸ್ಪೆಷಲ್ ಕೇಸ್ ನಂಃ 58/2021 ಪಿ.ಡಬ್ಲ್ಯುಃ 3**

**ಸಿ.ಡಬ್ಲ್ಯುಃ 3**

| | |
|---|---|
| ಸಾಕ್ಷಿದಾರರ ಹೆಸರು | ರಾಮಕೃಷ್ಣ ರೈ. |
| ತಂದೆಯ ಹೆಸರು | ಜತ್ತಪ್ಪ ರೈ |
| ವಯಸ್ಸು | 62 ವರ್ಷ |
| ಉದ್ಯೋಗ | ನಿವೃತ್ತ ಆರ್ ಟಿ. ಓ. |
| ವಿಳಾಸ | ಬೆಂಗಳೂರು |

ದಿನಾಂಕಃ 29-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ನಾನು ಜೂನ್ -2016 ರಿಂದ ಜೂನ್ -2019 ರವರೆಗೆ ಉಡುಪಿಯ ಆರ್ ಟಿ ಓ ಕಚೇರಿಯಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನ್ಯಾಯಾಲಯದಲ್ಲಿರುವ 1 ನೇ ಆರೋಪಿ ನನ್ನ ಮೇಲಾಧಿಕಾರಿಯಾಗಿದ್ದರು. 2 ನೇ ಅರೋಪಿ ಸಹ ಆಗ ಕಚೇರಿಯಲ್ಲಿ ಹೊರಗುತ್ತಿಗೆ ಆಧಾರದಿಂದ ಕೆಲಸ ನಿರ್ವಹಿಸುತ್ತಿದ್ದ.

2) ದಿನಾಂಕ 16-03-2019 ರಂದು ನಾನು ವಿರಾಮದ ಸಮಯದಲ್ಲಿ ಮನೆಗೆ ಊಟಕ್ಕೆ ಹೋಗಿದ್ದೆ. ಸುಮಾರು 3 ಗಂಟೆಯ ಸಮಯದಲ್ಲಿ ಎಸಿಬಿ ಅಧಿಕಾರಿಗಳೆಂದು ಪರಿಚಯಿಸಿಕೊಂಡ, ದೂರವಾಣಿಯ ಮೊಬೈಲ್ ಮೂಲಕ ಆರ್ ಟಿ ಓ ಕಚೇರಿಗೆ ಕೂಡಲೇ ಬರಬೇಕೆಂದು ಸೂಚಿಸಿದ್ದರು. ಆ ಸಮಯದಲ್ಲಿ ಮಧ್ಯಾಹ್ನದ 3 ಗಂಟೆ ಆಗಿದ್ದು, ನನ್ನನ್ನು 1 ನೇ ಆರೋಪಿಯ ಕೋಣೆಗೆ ಕರೆಸಿದ್ದರು. ಅಲ್ಲಿ ಚಾಸಾ -20 ಮತ್ತು ಐದಾರು ಮಂದಿ ಸಿಬ್ಬಂದಿಗಳೊಂದಿಗೆ ಇದ್ದರು. ಅಲ್ಲಿ 1 ಮತ್ತು 2 ನೇ ಆರೋಪಿತರನ್ನು ಕೂರಿಸಿದ್ದರು. ಅಲ್ಲಿ ಇದ್ದ ಬೇರೆಯವರು ಯಾರು ಎಂದು ಈಗ ನೆನಪಿಲ್ಲ. ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಅವರ ಕೆಲಸದಲ್ಲಿ ಮಗ್ನರಾಗಿದ್ದರು.

3) ನನಗೆ ತನಿಖಾಧಿಕಾರಿ ಕೆಲ ದಾಖಲೆಗಳನ್ನು ಅಟೆಸ್ಟ್ ಮಾಡಿಕೊಡಬೇಕೆಂದು ಹೇಳಿ ಜೆರಾಕ್ಸ ಪ್ರತಿಗಳನ್ನು ಕೊಟ್ಟಿದ್ದರು, ನಾನು ಅವುಗಳನ್ನು ನೋಡಿ ಅಟೆಸ್ಟ ಮಾಡಿಕೊಟ್ಟಿದ್ದೆ. ನಂತರ ನನಗೆ ವಾಯ್ಸ ರೆಕಾರ್ಡ್ ರ್ ಅಥವಾ ಮೊಬೈಲ್ ಒಂದನ್ನು ಕೊಟ್ಟು ಅದರಲ್ಲಿ ಬರುವ ಸಂಭಾಷಣೆಯನ್ನು ಮತ್ತು ಧ್ವನಿಯನ್ನು ಗುರುತಿಸಿ ಹೇಳಲು ಹೇಳಿದ್ದರು. ನಾನು ಅದನ್ನು ಕೇಳಿದಾಗ, ಅದರಲ್ಲಿ ಸರಿಯಾದ ಧ್ವನಿಗಳು ಕೇಳದೇ ಇದ್ದುದರಿಂದ ಗುರುತಿಸಲು ಆಗುವುದಿಲ್ಲಾ ಎಂದು ಹೇಳಿದ್ದೆ. ಸಂಜೆಯ 7 – 7-30 ಗಂಟೆಯ ಸಮಯದಲ್ಲಿ ಆರೋಪಿತರಿಬ್ಬರನ್ನು ಕರೆದುಕೊಂಡು ಹೋಗುವುದಾಗಿ ಹೇಳಿದರು. ಆ ದಿನ ಆರೋಪಿತರಿಂದ ಏನು ಅಪರಾಧವಾಗಿತ್ತು ಎಂದು ನನಗೆ ತಿಳಿದಿರಲಿಲ್ಲ. ಸಂಕ್ಷಿಪ್ತವಾಗಿ ಯಾರು ಹಣ ಪಡೆದಿದ್ದಾರೆಂದು ಹೇಳಿಲ್ಲ. ಆದಿನ ಪೊಲೀಸರು ಏನು ಪ್ರಕ್ರಿಯೆ ಮಾಡಿದ್ದರು ಎಂದು ಗೊತ್ತಿಲ್ಲ. ಆರೋಪಿತರು ಏನು ಸಮಜಾಯಿಷಿ ಬರೆದುಕೊಟ್ಟಿದ್ದರು ಎಂದು ಗೊತ್ತಿಲ್ಲ. ಇವತ್ತು ಆ ಸಂಭಾಷಣೆಯನ್ನು ಪ್ಲೇ ಮಾಡಿದರೆ ಸಾಧ್ಯವಾದರೇ ಅದನ್ನು ಗುರುತಿಸಬಲ್ಲೆ.

4) ಕಚೇರಿಯ ಸಾರಿಗೇತರ ವಿಭಾಗಕ್ಕೆ ಸಂಬಂಧಿಸಿದ ಒಂದು ವಾಹನದ ಕಡತವನ್ನು ನಾನು ಕೊಟ್ಟಿದ್ದು ನೆನಪಿಲ್ಲ, ಆದರೆ ನಮ್ಮ ಸಿಬ್ಬಂದಿಯವರು ಕೊಟ್ಟಿರಬಹುದು. ಅದು ಯಾವ ವಾಹನ ಎಂದು ಕಡತವನ್ನು ನೋಡಿ ಹೇಳಬಲ್ಲೆ. ನನಗೆ ಈಗ ತೋರಿಸಿದ ನಿಶಾನೆ ಪಿ-3 ರ ಕಡತದ, 2 ಮತ್ತು 3 ನೇ ಪುಟದಲ್ಲಿ ನನ್ನ ಸಹಿ ಇದೆ. ನಿಪಿ-3 ರ ಕಡತ ನಮ್ಮ ಕಚೇರಿಯ ಮೂಲ ಕಡತವಾಗಿದೆ. ನನಗೆ ಈಗ ತೋರಿಸಿದ ನಿಪಿ-8 ರ ದಾಖಲೆಯನ್ನು ಮೂಲ ದಾಖಲೆಯೊಂದಿಗೆ ನೋಡಿ ಪ್ರತಿಯಾಗಿರುವುದಕ್ಕಾಗಿ ಸೀಲು ಹಾಕಿ, ಸಹಿ ಮಾಡಿದ್ದೇವೆ. ನಿಪಿ-8 ರ ದಾಖಲೆ ನಮ್ಮ ಕಚೇರಿಯ ತೆರಿಗೆ ಮರು ಪಾವತಿ ವಿಭಾಗದಲ್ಲಿ ನಿರ್ವಹಿಸುವ ದಾಖಲಾತಿ ಆಗಿದೆ.

5) ನನಗೆ ಈಗ ತೋರಿಸಿದ ನಿಶಾನೆ ಪಿ-4 ರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಅದರಲ್ಲಿರುವ ನನ್ನ ಸಹಿ ನಿಪಿ-4(ಸಿ) ಎಂದು ಗುರುತಿಸಿದ್ದೇನೆ. ನಿಪಿ-4 ಮಹಜರು ವಿವರ ಎಂದು ಗೊತ್ತು. ಅದರಲ್ಲಿ ಏನು ಬರೆದಿದೆ ಎಂದು ಈಗ ನೆನಪಿಲ್ಲ. ಓದಿ ಹೇಳಬಲ್ಲೆ.

**( ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿಸವಾಲು ಮಾಡಲು ವಿಶೇಷ ಸಾರ್ವಜನಿಕ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟೀಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ಆದಿನ ನನ್ನನ್ನು ಎಸಿಬಿ ಅಧಿಕಾರಿಗಳು ಕಚೇರಿಗೆ ಕರೆಯಿಸಿದಾಗ 1 ನೇ ಆರೋಪಿ ಲಂಚ ಪಡೆದಿರುವುದನ್ನು ನನಗೆ ಹೇಳಿದ್ದರು ಎಂದರೆ ನಿಜ. ಅವರು ಪಿರ್ಯಾಧಿಗೆ ಸಂಬಂಧಪಟ್ಟ ಕಾರು ನಂಬ್ರ ಕೆಎ-20-ಪಿ -5464 ಇದರ ತೆರಿಗೆ ಮರುಪಾವತಿಯ ಅರ್ಜಿದಾರ ಇರುತ್ತಾರೆ ಎಂದರೆ ನಿಜ. 1 ನೇ ಅರೋಪಿ ಆದಿನ ರೂಪಾಯಿ 4 ಸಾವಿರಗಳ ಲಂಚ ತೆಗೆದುಕೊಂಡಿರುವುದು ನನಗೆ ಗೊತ್ತಾಗಿದೆ ಎಂದರೆ, ಅವರು ಹೇಳಿದ್ದರಿಂದ ತಿಳಿದಿದೆ. ಸದರಿ ಲಂಚದ ಹಣವನ್ನು 2 ನೇ ಆರೋಪಿಗೆ ನೀಡಿದ್ದು ಗೊತ್ತು ಎಂದರೆ, ಅವರು ಹೇಳಿದ್ದರಿಂದ ಗೊತ್ತು. ನಿಶಾನೆ ಪಿ-4 ಕ್ಕೆ ನಾನು ಓದಿ ನೋಡಿ, ಸಹಿ ಮಾಡಿದ್ದೇನೆ ಎಂದರೆ, ನನಗೆ ಈಗ ಅದು ಮರೆತಿದೆ.

2) ನನಗೆ ಈಗ ತೋರಿಸಿದ ನಿಶಾನೆ ಪಿ-6 ರ ಕೊನೆಯ ಎರಡು ಪೋಟೋಗಳಲ್ಲಿ ನಾನು ಇದ್ದೇನೆ. ಆದಿನ ಪೊಲೀಸರು ಇಬ್ಬರು ಅರೋಪಿತರ ಎರಡು ಕೈಗಳನ್ನು ಪ್ರತ್ಯೇಕವಾದ ಎರಡು ಬಟ್ಟಲಿನ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ನನ್ನ ಮುಂದೆ ತೊಳೆದಿದ್ದರು ಎಂದರೆ, ಅದು ಈಗ ನೆನಪಿಲ್ಲ. ಆಗ ದ್ರಾವಣದ ಬಣ್ಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತ್ತು ಎಂದರೆ, ನಾನು ಗಮನಿಸಿಲ್ಲ. ನಾನು ಆದಿನ ರೂಪಾಯಿ 4 ಸಾವಿರ ಲಂಚದ ಹಣವನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ಆದಿನ ನಾನು ತನಿಖಾಧಿಕಾರಿಗೆ ನನಗೆ ಈಗ ತೋರಿಸಿದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-24 ಎಂದು ಗುರುತಿಸಿದೆ.

3) 1 ನೇ ಅರೋಪಿ ನನ್ನ ಮೇಲಾಧಿಕಾರಿಯಾಗಿದ್ದರೆಂದು ಮತ್ತು 2 ನೇ ಅರೋಪಿ ನಮ್ಮ ಕಚೇರಿಯ ಗುತ್ತಿಗೆ ಆಧಾರದ ಕೆಲಸಗಾರನಾಗಿದ್ದರಿಂದ, ಈಗ ಈ ವಿಚಾರಣೆಯಿಂದ ತೊಂದರೆ ಆಗುತ್ತದೆ ಎಂದು, ಈಗ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದಿನ ತನಿಖಾಧಿಕಾರಿಗೆ ನಿಶಾನೆ ಪಿ-3 ರ ಕಚೇರಿಯ ಕಡತವನ್ನು ನಾನೇ ಕೊಟ್ಟಿದ್ದೇನೆ ಎಂದರೆ, ನೆನಪಿಲ್ಲ.

4) ನಾನು ಈಗ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ಅದರ ವಿಳಾಸ ಬಿ -206, ವೈಷ್ಣವಿ ಅಪಾರ್ಟಮೆಂಟ್, ಜೆ ಪಿ ನಗರ, 7 ನೇ ಹಂತ , ಬೆಂಗಳೂರು-62. ನನ್ನ

ಅಂಬಲಪಾಡಿಯ ಮನೆಯ ವಿಳಾಸ ಡೋರ ನಂಬ್ರ 3-2-36, ಡಿ-4, 2 ನೇ ಮುಖ್ಯರಸ್ತೆ, ಸಿಪಿಸಿ ಬಡಾವಣೆ, ಅಂಚೆ ಅಂಬಲಪಾಡಿ. ಮನೆಯ ಹೆಸರು ಸೃಷ್ಟಿ. ನನ್ನ ಇಬ್ಬರು ಗಂಡು ಮಕ್ಕಳು ಬಿಇ ಮಾಡಿ ಕೆಲಸದಲ್ಲಿದ್ದಾರೆ. ಒಬ್ಬರು ಅಡುಗೋಡಿಯ ಬಾಷ್‌ದಲ್ಲಿ, ಮತ್ತೊಬ್ಬ ಕೆಂಗೇರಿಯ ರೆಕ್ಸರೋತ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಎರಡು ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದೇನೆ. ನನ್ನ ಮೊಬೈಲ್ ನಂಬ್ರ 9845598988 ಆಗಿದೆ. ನನ್ನ ಇನ್ನೊಂದು ಮೊಬೈಲ್ ನಂಬ್ರ ಕಚೇರಿಯ ಮೊಬೈಲ್ ಆಗಿತ್ತು. ಅದು ನನ್ನ ಸೇವೆಯಲ್ಲಿದ್ದಾಗ ಮಾತ್ರ ಇತ್ತು.

5) ಬೆಂಕಿ ಅಪಘಾತದಲ್ಲಿ ವಾಹನ ಭಸ್ಮವಾದರೆ ರಸ್ತೆ ತೆರಿಗೆ ಮರಳಿಸಬೇಕಾಗುತ್ತದೆ ಎಂದರೆ ನಿಜ. ಈ ಪ್ರಕರಣದಲ್ಲಿ ಸುಟ್ಟು ಹೋಗಿದ್ದ ವಾಹನದ ಸಂಖ್ಯೆ ಕೆಎ-20-ಪಿ-5464 ಎಂದರೆ ನಿಜ. ಆ ವಾಹನದ ತೆರಿಗೆ 65 ಸಾವಿರದಷ್ಟು ಉಳಿಕೆಯಾಗಿತ್ತು ಎಂದರೆ,ಗೊತ್ತಿಲ್ಲ. ಈಗಲೂ ಸಹ ನನಗೆ ಉತ್ತಮವಾದ ನೆನಪಿನ ಶಕ್ತಿ ಇದೆ ಎಂದರೆ ನಿಜ. ನಾನು ಈದಿನ ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ ಸಾಕ್ಷ್ಯ ನೀಡಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಬಿ.ಹೆಚ್. ವಕೀಲರಿಂದ**

1) ನನಗೆ 1 ನೇ ಆರೋಪಿಯ ಕೋಣೆಗೆ ಬರಲು ಎಸಿಬಿ ಅಧಿಕಾರಿಗಳು ಹೇಳಿದ್ದರು. ನನಗೆ ಫೋನ್ ಬಂದಾಗ ಅಂದಾಜು ಸಮಯ 3.00 ಗಂಟೆ. ಆದಿನ ನಾನು ಆರೋಪಿಯ ಕೋಣೆಯಲ್ಲಿ ಸುಮಾರು 7 – 7-30 ಗಂಟೆಯವರೆಗೆ ಇದ್ದೆ. ನಿಶಾನೆ ಪಿ-3 ರಲ್ಲಿಯ 4 ನೇ ಪುಟ ಸಂಖ್ಯೆಯಲ್ಲಿ ಆರ್.ಓ. ಎಂದರೆ ರೀಪಂಡ್ ಆದೇಶ. ನನಗೆ ಈಗ ತೋರಿಸಿದ ಸಹಿ ಯಾರದ್ದು ಎಂದರೆ, ದಾಖಲೆಯನ್ನು ನೋಡಬೇಕು. ಸದರಿಯನ್ನು ನಿಶಾನೆ ಪಿ-3(ಎ) ಎಂದು ಗುರುತಿಸಿದೆ. ನಿಪಿ-3 ರ 5 ನೇ ಪುಟದಲ್ಲಿರುವ ಸಹಿ ಅರ್ಜಿದಾರರ ಸಹಿ ಎಂದರೆ ನಿಜ. ಸದರಿ ಸಹಿಯನ್ನು ನಿಶಾನೆ ಪಿ-3(ಬಿ) ಎಂದು ಗುರುತಿಸಿದೆ. ನಿಶಾನೆ ಪಿ-3(ಎ) ಸಹಿಯನ್ನು ಅವರ ಚೆಕ್ಕನ್ನು ಕೊಟ್ಟಾಗ ತೆಗೆದುಕೊಳ್ಳುವ ಸಹಿ ಎಂದರೆ ನಿಜ.

2) ನಾನು ಕಚೇರಿಗೆ ಹೋದಾಗ ನಿಶಾನೆ ಪಿ-3 ರ ದಾಖಲೆ ಪೊಲೀಸರ ಬಳಿ ಇತ್ತು ಎಂದರೆ, ನನಗೆ ಈಗ ನೆನಪಿಲ್ಲ. ನನಗೆ ಈಗ ತೋರಿಸಿದ ದಾಖಲೆ ನಮ್ಮ ಕಚೇರಿಯ ಆದೇಶದ ನಡಾವಳಿ. ಸದರಿ ದಾಖಲೆಯನ್ನು ನಿಶಾನೆ ಡಿ-1 ಎಂದು

ಗುರುತಿಸಿದೆ. ನನಗೆ ಈಗ ತೋರಿಸಿದ ದಾಖಲೆ ನಮ್ಮ ಕಚೇರಿಯಿಂದ ಖಜಾನೆಗೆ ಕೊಟ್ಟ ದಾಖಲೆಯಾಗಿದೆ. ಅದನ್ನು ನಿಶಾನೆ ಡಿ-2 ಎಂದು ಗುರುತಿಸಿದೆ.

3) ನಾನು ಎಸಿಬಿ ಪೊಲೀಸರ ಕರೆಯ ಮೇರೆಗೆ ನಮ್ಮ ಕಚೇರಿಗೆ ಹೋಗಿಲ್ಲ ಮತ್ತು 1 ನೇ ಅರೋಪಿಯ ಕೋಣೆಯಲ್ಲಿ ಇರಲಿಲ್ಲ ಮತ್ತು ದಾಖಲೆಗಳನ್ನು ಕೊಡಿಸಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಪರ ಶ್ರೀ ಎಸ್.ಎ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿರುತ್ತಾರೆ.**

**ಮರುವಿಚಾರಣೆಃ** ನನಗೆ ಈಗ ತೋರಿಸಿದ ನಿಶಾನೆ ಡಿ-2 ರ ದಾಖಲೆಯಲ್ಲಿ ಯಾವ ದಿನಾಂಕದಂದು ಖಜಾನೆಗೆ ಕಳುಹಿಸಿದೆ ಎಂದು ಅದನ್ನು ನೋಡಿ ಹೇಳಲು ಆಗುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ